# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 401 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎನ್., (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ-50 ವಿಜಯಪುರದಿಂದ ಕಲ್ಬುರ್ಗಿವರೆಗೆ ಸಂಚಾರಿ ದಟ್ಟಣೆಯಿಂದ ಕೂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ರಾಷ್ಟ್ರೀಯ ಹೆದ್ದಾರಿ-50 ವಿಜಯಪುರದಿಂದ ಕಲ್ಬುರ್ಗಿ ವರೆಗಿನ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಪ್ರಶ್ನೆಗೆ ಉತ್ತರವನ್ನು NHAI ದವರು ಈ ಕೆಳಕಂಡಂತೆ ಒದಗಿಸಿರುತ್ತಾರೆ.<br><br>ಪ್ರಸ್ತುತ ಈವಿಭಾಗವು ಪೇವ್ಡ್ ಶೋಲ್ಡರ್ ಸಹಿತ 2-ಲೇನ್ ಪಥವನ್ನು ಹೊಂದಿದ್ದು, ವಿಭಾಗವಾರು ಸರಾಸರಿ ಸಂಚಾರದ ಪ್ರಮಾಣವು ಈಕೆಳಗಿನಂತಿದೆ:<br><br>ವಿಜಯಪುರ – ಸಿಂದಗಿ ಸೆಕ್ಷನ್: **14,500 PCU**<br>ಸಿಂದಗಿ – ಜೇವರ್ಗಿ ಸೆಕ್ಷನ್ **10,500 PCU**<br>ಜೇವರ್ಗಿ – ಕಲಬುರಗಿ ಸೆಕ್ಷನ್ : **20,000 PCU**<br><br>ಸಂಚಾರದ ಅವಶ್ಯಕತೆಗಳನ್ನು ಪೂರೈಸಲು ಹಾಗೂ ವಾಹನಗಳ ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು, ಈ ಹೆದ್ದಾರಿ ವಿಭಾಗವನ್ನು 4-ಲೇನ್‌ಗೆ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು NHAI ಪ್ರಾರಂಭಿಸಿದ್ದು, ವಿವರವಾದ ಯೋಜನಾ ವರದಿ (DPR) ತಯಾರಿಸಲು DPR ಸಲಹೆಗಾರರನ್ನು ನೇಮಿಸಲಾಗಿದ್ದು, ಪ್ರಸ್ತುತ DPR ತಯಾರಿಕೆಯು ಪ್ರಾಥಮಿಕ ಹಂತದಲ್ಲಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ) | ವಿಜಯಪುರದಿಂದ ಕಲ್ಬುರ್ಗಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ-51 ಮೇಲ್ದರ್ಜೆಗೆ ಏರಿಸಲಾಗಿದೆಯೇ; ಮೇಲ್ದರ್ಜೆಗೆ ಏರಿಸಲಾಗಿದ್ದರೆ ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು; | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ NH-50 ಹೆದ್ದಾರಿಯ ವಿಜಯಪುರದಿಂದ ಕಲಬುರಗಿ ವಿಭಾಗವು ಕಿ.ಮೀ.195/000 ರಿಂದ ಕಿ.ಮೀ. 349/300 ರವರೆಗೆ ಈ ಹಿಂದೆ EPC ಮಾದರಿಯಲ್ಲಿ ಪೇವ್ಡ್ ಶೋಲ್ಡರ್‌ಗಳೊಂದಿಗೆ ದ್ವಿಪಥ (Two-Lane) ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಇದರ ಪೂರ್ಣಗೊಂಡ ಪ್ರಮಾಣ ಪತ್ರವನ್ನು ದಿನಾಂಕ: 30.09.2019 ರಂದು ನೀಡಲಾಗಿದೆ.<br><br>ಪ್ರಸ್ತುತ ಮೇಲೆ ತಿಳಿಸಿರುವಂತೆ ಈ ಹೆದ್ದಾರಿಯನ್ನು 4-ಲೇನ್‌ಗೆ ಮೇಲ್ದರ್ಜೆಗೇರಿಸುವ ಸಲುವಾಗಿ ವಿವರವಾದ ಯೋಜನಾ ವರದಿ (DPR) ತಯಾರಿಸುವ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. DPR ಅಂತಿಮಗೊಂಡು, ಅನುಮೋದನೆ ದೊರೆತು ಹಾಗೂ ಯೋಜನೆಯ ಕಾಮಗಾರಿಯನ್ನು ವಹಿಸಿಕೊಟ್ಟ ನಂತರ, 4-ಲೇನ್‌ಗೆ ಮೇಲ್ದರ್ಜೆಗೇರಿಸುವ ಕಾಮಗಾರಿಯ ಪೂರ್ಣಗೊಳಿಸುವ ದಿನಾಂಕ ಮತ್ತು ಅವಧಿಯನ್ನು ನಿರ್ಧರಿಸಲಾಗುವುದು. |

| | | |
|---|---|---|
| **ಇ)** | ರಾಜ್ಯ ಹೆದ್ದಾರಿ-41 ಶಿರಾಡೋಣದಿಂದ ಲಿಂಗಸೂಗೂರು ರಸ್ತೆಯು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ರಾಜ್ಯ ಹೆದ್ದಾರಿ-41 ಮತ್ತು 34 ಸೇರಿದಂತೆ ಶಿರಾಡೋಣ ಮಹಾರಾಷ್ಟ್ರ ಗಡಿಯಿಂದ ಲಿಂಗಸುಗೂರು ವಾಯಾ ಚಡಚಣ-ಝಳಕಿ-ಇಂಡಿ-ತಾಂಬಾ-ದೇವರಹಿಪ್ಪರಗಿ-ಹೂವಿನ ಹಿಪ್ಪರಿಗಿ-ಮುದ್ದೇಬಿಹಾಳ-ನಾಲತವಾಡ-ನಾರಾಯಣಪೂರ-ರೋಡಲಬಂಡಾ- ಎನ್.ಹೆಚ್. ಎಂದು 2016-17 ರಲ್ಲಿ ಭೂ-ಸಾರಿಗೆ ಮಂತ್ರಾಲಯ ನವದೆಹಲಿ ಇವರಿಂದ ತಾತ್ವಿಕ ಅನುಮೋದನೆ ನೀಡಲಾಗಿದೆ.<br><br>ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರಾದ ಸಾಟ್ರಾ ಕನ್ಸಲ್ಟಂಟ್ ಇವರಿಗೆ ವಹಿಸಲಾಗಿದ್ದು, ಸಮಾಲೋಚಕರು ವಿಸ್ತೃತ ಯೋಜನಾ ವರದಿಯನ್ನು ಪ್ರಾರಂಭಿಸಿ ಪಂಕ್ತಿಕರಣ ಅನುಮೋದನೆಯಾಗಿ ಆರಂಭಿಕ ವರದಿಯನ್ನು ಸಹ ಸಲ್ಲಿಸಿರುತ್ತಾರೆ. ಆದರೆ, ಭೂ-ಸಾರಿಗೆ ಮಂತ್ರಾಲಯದಿಂದ ಸೂಚಿಸಲಾದ ಪ್ರಕಾರ ಸಮಾಲೋಚಕರಿಂದ ಇದನ್ನು ಅವಧಿ ಪೂರ್ವವಾಗಿ ಮುಕ್ತಾಯಗೊಳಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿಯ ಅಂತಿಮ ಅಧಿಸೂಚನೆಗಾಗಿ ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್ ರವರ ಕಛೇರಿಯಿಂದ ದಿನಾಂಕ: 12.11.2021 ರಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಪ್ರಾದೇಶಿಕ ಕಛೇರಿ ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ನೀತಿ ಆಯೋಗದಿಂದ ಅಧಿಸೂಚನೆ ನಿರೀಕ್ಷಿಸಲಾಗಿದೆ. |

ಸಂಖ್ಯೆ: ಲೋಇ 358 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು